ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೈಗಾರಿಕಾ ಅಭಿವೃದ್ಧಿಗೆ ಉತ್ತೇಜನ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE : 9/3/2020

ಕೈಗಾರಿಕೆ ನಿಯಮ ಸರಳಕ್ಕೆ ವಿಧೇಯಕ ಮಂಡನೆ

ನಿರ್ಮಾಣ ಚಟುವಟಿಕೆಗೆ ಅನಿವಾರ್ಯವಾಗಿರುವ ಕೈಗಾರಿಕೆಗಳ ಸುಸೂತ್ರ ಕಾರ್ಯಾಚರಣೆಗೆ ಅನುವು ಮಾಡಿಕೊಡಲು ಸದ್ಯದ ಕೆಲವೊಂದು ಬಿಗಿ ನಿಯಮಗಳನ್ನು ಸಡಿಲಗೊಳಿಸುವ ಉದ್ದೇಶದ ''ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ ತಿದ್ದುಪಡಿ ವಿಧೇಯಕ -2020'' ಅನ್ನು ಸಚಿವ ಮಾಧುಸ್ವಾಮಿ ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದರು.

ವಿಧೇಯಕದಲ್ಲಿ ಕ್ರಷರ್ ಮಾಲೀಕರು ಎದುರಿಸುತ್ತಿರುವ ಸಮಸ್ಯೆ, ಪರವಾನಗಿ ವರ್ಗಾವಣೆ, ಪರವಾನಗಿ ಅವಧಿ ವಿಸ್ತರಣೆ ನಿಯಮ ಸಡಿಲಗೊಳಿಸುವ ಜತೆಗೆ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ರಾಜಿಗೆ ಅವಕಾಶ ಕಲ್ಪಿಸಲಾಗಿದೆ. ಪರವಾನಗಿ ನವೀಕರಣಕ್ಕಾಗಿ 3 ತಿಂಗಳು ಮೊದಲು ಸಲ್ಲಿಸಬೇಕಿದ್ದ ಅರ್ಜಿ ಅವಧಿಯನ್ನು 1 ತಿಂಗಳಿಗೆ ಇಳಿಕೆಯಾಗಿದೆ. ಪರವಾನಗಿ ಅವಧಿಯನ್ನು 20 ವರ್ಷಗಳಿಗೆ ವಿಸ್ತರಣೆ ಮಾಡಲು ಪ್ರಸ್ತಾಪಿಸಲಾಗಿದೆ. ಮುಖ್ಯವಾಗಿ, ಕ್ರಷರ್ ಆರಂಭಕ್ಕೆ ಒಂದು ಬಾರಿ ಅನುಮತಿ ಕಲ್ಪಿಸಿದ ಬಳಿಕ ಸುತ್ತಲಿನ ನಿವಾಸಿಗಳಲ್ಲಿ ಧೂಳಿನಿಂದ, ಶಾಲೆ, ದೇವಾಲಯ ಅಥವಾ ರಸ್ತೆಗಳು ಬಂದರೆ, ಅಂತಹ ಪರವಾನಗಿ ಮುಂದುವರಿಕೆ ಮತ್ತು ನವೀಕರಣಕ್ಕೆ ಅಡ್ಡಿಯಾಗುವುದಿಲ್ಲ. ನಿಯಮಾವಳಿ ಉಲ್ಲಂಘನೆಗಾಗಿ ಶಿಕ್ಷೆ ಮತ್ತು ದಂಡದ ಪ್ರಮಾಣವನ್ನೂ ತಗ್ಗಿಸಲು ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ.